# ನಾನಿ ಪಯಣದ ನಾನಾ ಕಥೆ

ನಾನಿ ಅಭಿನಯದ ತೆಲುಗು ಸಿನಿಮಾ 'ಹಿಟ್ 3' ಬಾಕ್ಸಾಫೀಸ್ ಗಳಿಕೆಯಲ್ಲಿ ನೂರು ಕೋಟಿ ರೂಪಾಯಿ ಗಡಿ ದಾಟಿರುವ ಸುದ್ದಿ ಇದೆ. ಅಮೆರಿಕದಲ್ಲಿ ಅವರ ಚಿತ್ರಕ್ಕೆ ಸಿಕ್ಕಿರುವ ಪ್ರತಿಕ್ರಿಯೆ ಹಿಂದೆಂದಿಗಿಂತಲೂ ಉತ್ತಮವಾಗಿದೆ. ಇದುವರೆಗಿನ ಅವರ ಸಿನಿಮಾಗಳಲ್ಲಿ ಮೂರನೇ ಅತಿ ಹೆಚ್ಚು ಗಳಿಕೆ ದಾಖಲಿಸಿರುವ ಚಿತ್ರ ಎಂಬ ಅಗ್ಗಳಿಕೆಯೂ ' 'ಹಿಟ್ 3' ಸಿನಿಮಾದ್ದಾಗಿದೆ.

ಶೈಲೇಶ್ ಕೊಲನು ನಿರ್ದೇಶನದ ಈ ಸಿನಿಮಾದಲ್ಲಿ ಹಿಂಸೆ ಇದೆ. ಅದನ್ನು ಫ್ಯಾಂಟಸಿ ಮಟ್ಟಕ್ಕೆ ಕೊಂಡೊಯ್ಯುವ ಸಾಹಸ ದೃಶ್ಯಗಳು ಕೂಡ ಇವೆ. ಯುವ ಮನಸ್ಸುಗಳನ್ನು ಹಿಡಿದಿಡುವ ತಂತ್ರ ಇದಾಗಿದ್ದು, ನಿರ್ದೇಶಕರ ಲೆಕ್ಕಾಚಾರ ಫಲ ಕೊಟ್ಟಿದೆ.

ನಾನಿ ಈ ಚಿತ್ರದ ಪ್ರಚಾರದಲ್ಲಿ ತೊಡಗಿದ್ದಾಗ ಅವರ ವೃತ್ತಿ ಬದುಕಿನ ಹಳೆಯ ಪುಟಗಳೂ ತೆರೆದುಕೊಂಡವು. ಸಿನಿಮಾ ಸಹಾಯಕ ನಿರ್ದೇಶಕರಾಗಿ ಅವರು ಕೆಲಸ ಶುರು ಮಾಡಿದಾಗ ನಾಲ್ಕು ಸಾವಿರ ಸಂಬಳ ಅವರಿಗೆ ಸಿಗುತ್ತಿತ್ತು. ಮನೆಯಲ್ಲಿ ಕೆಲಸಕ್ಕೆ ಬಾರದ ಹುಡುಗ ಎಂದೇ ಆಗ ಎಲ್ಲರೂ ಹಂಗಿಸುತ್ತಾ ಇದ್ದರು. ಇವನಂತೆ ಮಾತ್ರ ಆಗಬೇಡ ಎನ್ನುವುದು ಅನೇಕರ ಬೋಧನೆಯಾಗಿತ್ತು. ಆದರೆ, ನಾನಿ ಸಿನಿಮಾವನ್ನೇ ಉಸಿರಾಡುತ್ತ ಬಂದರು. ಕ್ರಮೇಣ ಅವರಿಗೆ 'ನ್ಯಾಚುರಲ್ ಸ್ಟಾರ್' ಎಂಬ ಬಿರುದು ಅಂಟಿಕೊಂಡಿತು. ಅದಕ್ಕೆ ತಕ್ಕಂತೆ ಸರಳವಾಗಿ, ಸಹಜವಾಗಿ ಅಭಿನಯಿಸುವುದನ್ನು ಅವರು ರೂಢಿಸಿಕೊಳ್ಳುತ್ತಾ ಬಂದರು. 'ದಸರಾ' ಸಿನಿಮಾ ಅವರಿಗೆ ಬದುಕಿನಲ್ಲಿ ದೊಡ್ಡ ತಿರುವು ನೀಡಿದ ಸಿನಿಮಾ. ಕಚ್ಚಾ ಶೈಲಿಯ ಅವರ ಅಭಿನಯ ಮೆಚ್ಚದವರು ವಿರಳ. 'ಹಾಯ್ ನಾನಾ' ತೆಲುಗು ಸಿನಿಮಾದಲ್ಲಿ ಪುಟ್ಟ ಕಂದನ ತಂದೆಯ ಪಾತ್ರಕ್ಕೆ ಅವರು ಜೀವ ತುಂಬಿದ ಬಗೆಯನ್ನೂ ಅನೇಕರು ಕೊಂಡಾಡಿದ್ದರು.

ಸಾಹಸ, ಹಾಸ್ಯ, ಪ್ರೇಮಕತೆ, ನವಿರಾದ ಶೈಲಿಯ ಚಿತ್ರಕಥೆ ಎಲ್ಲಕ್ಕೂ ಒಡ್ಡಿಕೊಳ್ಳುತ್ತಾ, ಪ್ರಯೋಗಮುಖಿ ಆದ ನಾನಿ ಅವರ ಸಂಭಾವನೆ ಇದೀಗ 40 ಕೋಟಿ ರೂಪಾಯಿ. ನಾಲ್ಕು ಸಾವಿರ ಸಂಬಳದಿಂದ ಇಷ್ಟರ ಮಟ್ಟಕ್ಕೆ ಬೆಳೆಯಲು ಅವರು ಹೊಡೆದಿರುವ ಸೈಕಲ್ ಕುರಿತು ಬರೆದರೆ ಒಂದು ದೊಡ್ಡ ಪ್ರಬಂಧವೇ ಆದೀತು.



# ನೇಪಥ್ಯಕ್ಕೆ ಸರಿದ ನಾಯಕಿ ಪ್ರಧಾನ ಕಥನ



'ಪರಿಣೀತ' ಹಿಂದಿ ಸಿನಿಮಾ ಎರಡು ದಶಕಗಳ ಹಿಂದೆ ತೆರೆಕಂಡಿತ್ತು. ಪ್ರದೀಪ್ ಸರ್ಕಾರ್ ನಿರ್ದೇಶನದ ಈ ಚಿತ್ರ ಒಬ್ಬ ಪ್ರತಿಭಾನ್ವಿತ ನಾಯಕಿಯನ್ನು ಚಿತ್ರರಂಗಕ್ಕೆ ಕೊಟ್ಟಿತು. ಅವರೇ ವಿದ್ಯಾ ಬಾಲನ್. ನಾಯಕಿಯ ಪಾತ್ರಕ್ಕೆ ಆದ್ಯತೆ ಇರುವ ಸಿನಿಮಾಗಳಲ್ಲಿ ಅಭಿನಯಿಸುವ ಮೂಲಕ ತಮ್ಮತನವನ್ನು ಬಹುಕಾಲ ಕಾಪಾಡಿಕೊಂಡು ಬಂದವರು ವಿದ್ಯಾ. ಆದರೆ, ಇತ್ತೀಚೆಗೆ ನಾಯಕಿ ಪ್ರಧಾನ ಚಿತ್ರಗಳು ಹಿಂದಿ ಭಾಷೆಯಲ್ಲಿಯೂ ವಿರಳವಾಗುತ್ತಿವೆ. ಹೀಗೆ ಆಗುತ್ತಿರುವುದು ಯಾಕೆ ಎಂಬ ಪ್ರಶ್ನೆ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಅವರಿಗೆ ಎದುರಾಯಿತು. ಅದಕ್ಕೆ ಅವರು ವಿವರವಾದ ಉತ್ತರ ಕೊಟ್ಟರು.

'ಕೋವಿಡ್ ಬಂದ ನಂತರ ಜನರು ಚಿತ್ರಮಂದಿರಗಳಿಗೆ ಬರುವುದು ಕಡಿಮೆಯಾಗಿದೆ. ಈಗ ನಾಯಕಿಯನ್ನೇ ಮುಖ್ಯ ಪಾತ್ರವನ್ನಾಗಿಸಿ ಸಿನಿಮಾ ಮಾಡಿದರೆ ಗಿಟ್ಟುತ್ತಿಲ್ಲ. ವಾಣಿಜ್ಯಕವಾಗಿ ಆಲೋಚನೆ ಮಾಡುವವರು ಸಹಜವಾಗಿಯೇ ಮಹಿಳಾ ಪಾತ್ರಕ್ಕೆ ಆದ್ಯತೆ ನೀಡುವ ಕಥೆಗಳಿಗೆ ಬೆನ್ನುಮಾಡಿದ್ದಾರೆ. ಹೀಗಾಗಿ ಹಿಂದೆ ನಾನು ಮಾಡಿದಂಥ ಸಿನಿಮಾಗಳನ್ನು ಮಾಡುವವರು ಈಗ ಇಲ್ಲವಾಗಿದ್ದಾರೆ' ಎಂದು ವಿದ್ಯಾ ಸದ್ಯದ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲಿದರು.

'ಪಾ', 'ದಿ ಡರ್ಟಿ ಪಿಕ್ಚರ್', 'ಕಹಾನಿ', 'ತುಮ್ಹಾರಿ ಸುಲು', 'ಶಕುಂತಲಾದೇವಿ', 'ಶಾದಿ ಕೆ ಸೈಡ್ ಎಫೆಕ್ಟ್ಸ್', 'ಹಮಾರಿ ಅಧೂರಿ ಕಹಾನಿ', 'ಶೇರ್‌ನಿ' — ಹೀಗೆ ವಿದ್ಯಾ ಪಾತ್ರವೈವಿಧ್ಯದ ಚಿತ್ರಗಳು ಕಣ್ಣಮುಂದೆ ಹಾದು ಹೋಗುತ್ತವೆ.

ಪತಿ ವಿಧು ವಿನೋದ್ ಚೋಪ್ರಾ ಖುದ್ದು ಚಿತ್ರ ನಿರ್ಮಾಣದಲ್ಲಿ ತೊಡಗಿರುವುದರಿಂದ ವಿದ್ಯಾ ಅವರಿಗೆ ಸದ್ಯದ ಮಾರುಕಟ್ಟೆಯ ಅರಿವು ಚೆನ್ನಾಗಿದೆ. ಹಾಗಿದ್ದರೆ ಸದ್ಯ ಸ್ಟುಡಿಯೊಗಳು ಎಂತಹ ಸಿನಿಮಾಗಳನ್ನು ಮಾಡಲು ಬಯಸುತ್ತಿವೆ ಎಂಬ ಇನ್ನೊಂದು ಪ್ರಶ್ನೆಗೆ ವಿದ್ಯಾ ಬಾಲನ್ ಕೊಟ್ಟ ಉತ್ತರ ಹೀಗಿದೆ: 'ಈಗ ಐತಿಹಾಸಿಕ ಪಾತ್ರಗಳನ್ನು ಮತ್ತೆ ಮತ್ತೆ ಪ್ರೇಕ್ಷಕರಿಗೆ ಹೇಳುವ ಪ್ರಯತ್ನಗಳು ಗರಿಗೆದರಿವೆ. ಹಲವಾರು ಸ್ಕ್ರಿಪ್ಟ್‌ಗಳು ಅದೇ ಉದ್ದೇಶದಿಂದ ತಯಾರಾಗುತ್ತಿವೆ.' ವಿದ್ಯಾ ಅವರ ಮಾತಿಗೆ ಪುಷ್ಟಿ ಕೊಡುವಂತೆ ಇತಿಹಾಸದ ಪಾತ್ರಗಳ ಚಿತ್ರಗಳು ಬಿಡುಗಡೆಯಾಗುತ್ತಿರುವುದಂತೂ ಸತ್ಯ.